ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಜನಾಂಗದವರನ್ನು ಕಡೆಗಾಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಕ್ತ ಆದೇಶ ನೀಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ;

ಇ) ಸಂಬಂಧಿಸಿದ ಇಲಾಖೆಯಲ್ಲಿ ಇಲಾಖಾ ಪರೀಕ್ಷೆಯಲ್ಲಿ ನಿಗದಿತ ವೇಳೆಯಲ್ಲಿ (ಅಂದರೆ 1986–87ನೇ ಸಾಲಿನಲ್ಲಿ) ತೇರ್ಗಡೆ ಹೊಂದಿದ್ದರೂ ಸಹ ಮತ್ತು ಬಡ್ತಿಯ ಅಂಚಿನಲ್ಲಿಯೂ ಇದ್ದರೂ ಸಹ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸರ್ಕಾರದ ಆದೇಶಗಳ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಂದ ವಿವಿಧ ವೃಂದದಲ್ಲಿ ಬಡ್ತಿಯಿಂದ ತುಂಬಬೇಕಾದ ಹುದ್ದೆಗಳಲ್ಲಿ ಈ ವರ್ಗದವರನ್ನು ಕಡೆಗಾಣಿಸಿರುವುದಿಲ್ಲ.

ಆ) ಪ್ರಶ್ನೆ ಸಂಖ್ಯೆ: 'ಅ' ರಲ್ಲಿ ನೀಡಿರುವ ಉತ್ತರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಯಾವುದೇ ನೀತಿಯ ಅನ್ಯಾಯವಾಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲಾಖೆಯಲ್ಲಿ ಬಡ್ತಿಯನ್ನು ನೀಡುವಲ್ಲಿ ಯಾವುದೇ ವಿಳಂಬ ನೀತಿಯನ್ನು ಅನುಸರಿಸುತ್ತಿಲ್ಲ.

ಈ) (ಅ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

## ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಬಗ್ಗೆ

**383 (251):** ಶ್ರೀ ಅಂಜನಮೂರ್ತಿ (ನೆಲಮಂಗಲ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1990 ರಿಂದ ಇಂದಿನವರೆಗೆ ನೆಲಮಂಗಲ ಮತ ಕ್ಷೇತ್ರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕೊಳವೆ ಬಾವಿ ತೋಡಿಸಲು ಎಷ್ಟು ಮನವಿ ಅರ್ಜಿ ಬಂದಿದೆ;

ಆ) ಆವುಗಳಲ್ಲಿ ಎಷ್ಟನ್ನು ಕಾರ್ಯಗತಗೊಳಿಸಲಾಗಿದೆ ಹಾಗೂ ಕೊರೆದ ಎಷ್ಟು ಕೊಳವೆ ಬಾವಿಗಳು ವಿಫಲಗೊಂಡಿದೆ;

ಇ) ಪಾಯಿಂಟ್ ಗುರ್ತಿಸುವ ಭೂಗರ್ಭ ತಜ್ಞರಿಂದ ಅವ್ಯವಹಾರ ನಡೆಯುತ್ತಿರುವ ಬಗ್ಗೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಫಲಾನುಭವಿಗಳು ಅನೇಕ ದೂರುಗಳು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮಂತ್ರಿಗಳು):–

ಆ) 264 ಮನವಿ ಅರ್ಜಿಗಳು ಬಂದಿವೆ.

ಅ) ಜಲಬಿಂದು ಗುರ್ತಿಸಲು ಸರ್ವೆ ಮಾಡಲಾದ 223 ಸ್ಥಳಗಳಲ್ಲಿ 46 ಸ್ಥಳಗಳಲ್ಲಿ ನೀರು ಇರುವ ಸಾಧ್ಯತೆ ಇದೆ ಎಂದು ಕಂಡುಬಂದಿತು. ಈ 46 ಜಾಗಗಳಲ್ಲಿ ಕೊರೆದ ಬಾವಿಗಳಲ್ಲಿ 34 ಬಾವಿಗಳು ಯಶಸ್ವಿಯಾಗಿವೆ.

ಇ) ಹೌದು. ಒಬ್ಬ ಭೂ ಗರ್ಭತಜ್ಞರ ಮೇಲೆ ದಿನಾಂಕ 19-2-92ರಂದು ದೂರು ಬಂದಿದೆ.

ಈ) ಈ ದೂರನ್ನು (ಬಾವಿ ಕೊರೆಯುವ ಟಿಗಿನ ಗುತ್ತಿಗೆದಾರರಾಗಿದ್ದ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರಿಗೆ ತಿಳಿಸಲಾಗಿ ಅವರು ಸಂಬಂಧಪಟ್ಟ ಭೂ ವಿಜ್ಞಾನಿಗೆ ನೀಡಿದ್ದ ಗುತ್ತಿಗೆಯನ್ನು ರದ್ದುಪಡಿಸಿರುತ್ತಾರೆ.

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಸಾಶನ ಸೌಲಭ್ಯದ ಕುರಿತು

**392 (10):** ಬಿ.ಎಂ. ಇದಿನಬ್ಬ (ಉಳ್ಳಾಲ):-

ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91, 91-92ನೇ ಡಿಸೆಂಬರ್ ಅಖೈರ್‌ವರೆಗೆ ಎಷ್ಟು ಜನರಿಗೆ ವಿಧವಾ ಮಸಾಶನ ವೇತನ, ವೃದ್ಧಾಪ್ಯವೇತನ ಅಂಗವಿಕಲ ವೇತನ, ನೀಡಲಾಗಿದೆ; (ತಾಲ್ಲೂಕುವಾರು ವಿವರ ಬೇರೆ ಬೇರೆಯಾಗಿ ನೀಡುವುದು);

ಆ) ಇನ್ನು ವಿಲೇವಾರಿಯಾಗದೆ ಬಾಕಿ ಉಳಿದಿರುವ ಅರ್ಜಿಗಳೆಷ್ಟು;

ಇ) ಅವುಗಳ ವಿಲೇವಾರಿ ಯಾವಾಗ ಮಾಡಲಾಗುವುದು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):-

| ಅ) | ವೃದ್ಧಾಪ್ಯ | ಅಂಗವಿಕಲ ವೇತನ | ವಿಧವಾ ಮಸಾಶನ |
|---|---|---|---|
| 1990-91 | 621 | 48 | 1225 |
| 1991-92 | 542 | 73 | 1118 |
| 1992-93 | 363 | 427 | 680 |

(ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಅ'ನಲ್ಲಿ ಕೊಡಲಾಗಿದೆ)

| ಆ) | ವೃದ್ಧಾಪ್ಯ | ಅಂಗವಿಕಲ | ವಿಧವಾ |
|---|---|---|---|
| ಬಾಕಿ ಉಳಿದಿರುವ ಅರ್ಜಿಗಳು | 117 | 101 | 153 |

(ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಆ'ನಲ್ಲಿ ಕೊಡಲಾಗಿದೆ)

ಇ) ಬಾಕಿ ಉಳಿದಿರುವ ಅರ್ಜಿಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡಲು ಜಿಲ್ಲಾಧಿಕಾರಿಯವರಿಗೆ ಸೂಚನೆ ನೀಡಲಾಗುವುದು.